	ಎಲ್ ಟಿ 4(ಎ)(II)		
	ನಗರ ಫೀಡರುಗಳಿಂದ ವಿದ್ಯುತ್ ಪಡೆಯುವ ನೀರಾವರಿ ಪಂಪುಸೆಟ್ಟು ಸ್ಥಾಪನಗಳು	ಪ್ರತಿ ಹೆಚ್ ಪಿ ಗೆ ಪ್ರತಿ ತಿಂಗಳಿಗೆ ರೂ 20/–	ಆ ತಿಂಗಳಲ್ಲಿ ಬಳಸಿದ ಯೂನಿಟ್ಟುಗಳಿಗೆ ಪ್ರತಿ ಯೂನಿಟ್ಟಿಗೆ 100ಪೈಸೆ
3	ಎಲ್ ಟಿ–4(ಬಿ) 10 ಹೆಚ್ ಪಿ ಗಿಂತ ಅಧಿಕ ಸಾಮರ್ಥ್ಯದ ನೀರಾವರಿ ಪಂಪುಸೆಟ್ಟು ಸ್ಥಾಪನಗಳು	ಪ್ರತಿ ಹೆಚ್ ಪಿ ಗೆ ಪ್ರತಿ ತಿಂಗಳಿಗೆ ರೂ 30/–	ಆ ತಿಂಗಳಲ್ಲಿ ಬಳಸಿದ ಎಲ್ಲಾ ಯುನಿಟ್ಟುಗಳಿಗೆ ಪ್ರತಿ ಯೂನಿಟ್ಟಿಗೆ 100 ಪೈಸೆ
4	ಎಲ್–ಟಿ–4(ಸಿ) ಖಾಸಗೀ ತೋಟಗಾರಿಕೆ ನರ್ಸರಿಗಳು, ಕಾಫಿ ಮತ್ತು ಟೀ ಪ್ಲಾಂಟೇಷನ್ನುಗಳು	ಪ್ರತಿ ಹೆಚ್ ಪಿ ಗೆ ಪ್ರತಿ ತಿಂಗಳಿಗೆ ರೂ 30/–	ಆ ತಿಂಗಳಲ್ಲಿ ಬಳಸಿದ ಎಲ್ಲಾ ಯುನಿಟ್ಟುಗಳಿಗೆ ಪ್ರತಿ ಯೂನಿಟ್ಟಿಗೆ 100 ಪೈಸೆ

ಇ) ಇದಕ್ಕಾಗಿ ತಗಲುವ ಸರಾಸರಿ ಸರಬರಾಜು ವೆಚ್ಚ ಪ್ರತಿ ಯೂನಿಟ್‌ಗೆ ರೂ 3 80

ಈ) 2002–03ನೇ ಸಾಲಿನಲ್ಲಿ ರೈತರು ರಿಯಾಯಿತಿ ದರದಲ್ಲಿ ಉಪಯೋಗಿಸಿದ ವಿದ್ಯುಚ್ಛಕ್ತಿಗೆ ಸರ್ಕಾರವು ರೂ 1,903 ಕೋಟಿಗಳ ಸಹಾಯ ಧನವನ್ನು ನೀಡಬೇಕಾಗಿತ್ತು 2002–03ನೇ ಸಾಲಿನಲ್ಲಿ ರೂ 1,699 ಕೋಟಿಗಳ ಸಹಾಯ ಧನವನ್ನು ಬಿಡುಗಡೆ ಮಾಡಿರುತ್ತದೆ

293 (675) ಶ್ರೀ ಪಾಟೀಲ್ ಎ ಬಿ (ಸಂಕೇಶ್ವರ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಬರುವ ರಾಜ್ಯ ಹೆದ್ದಾರಿಗೆ ಸಂಬಂಧಪಟ್ಟ ರಸ್ತೆಗಳು ಯಾವುವು,

ಆ) ಈ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ, ದುರಸ್ತಿ ಮಾಡಲು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಒಟ್ಟು 6 ರಾಜ್ಯ ಹೆದ್ದಾರಿಗಳಿದ್ದು, ಅವುಗಳ ವಿವರ ಕೆಳಗಿನಂತಿದೆ

1) ಪಟುಬಿದರಿ– ಚಿಕ್ಕಲಗುಡ್ಡ (ರಾಹೆ–1) ರಸ್ತೆ–33 59 ಕಿಮೀ

2) ಬಿಜಾಪುರ–ಸಂಕೇಶ್ವರ (ರಾಹೆ–12) ರಸ್ತೆ–16 44 ಕಿಮೀ

3) ಮಂಗಸೂಳಿ–ಲಕ್ಷ್ಮೇಶ್ವರ ರಸ್ತೆ (ರಾಹೆ–73)–16 57 ಕಿಮೀ

4) ಶೆಟ್ಟಿಹಳ್ಳಿ–ಇಚಲಕರಂಜಿ ರಸ್ತೆ (ರಾಹೆ–78)–44 09 ಕಿಮೀ

5) ಸಂಕೇಶ್ವರ–ಸದಲಗಾ ರಸ್ತೆ (ರಾಹೆ–97)– 6 40 ಕಿಮೀ

6) ಸಂಕೇಶ್ವರ–ಸಂಗಮ (ರಾಹೆ–44) ರಸ್ತೆ–28 35 ಕಿಮೀ

ಆ) ಬಂದಿರುತ್ತದೆ

ಇ) ಈ ರಾಜ್ಯ ಹೆದ್ದಾರಿಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೈಗೊಳ್ಳಲಾಗುತ್ತಿರುವ 2005–08 ರ ವರೆಗಿನ ಮೂರು ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣೆಯ ಯೋಜನೆ ಅಡಿಯಲ್ಲಿ ರೂ 386 ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ವಹಣೆಗಾಗಿ ತೆಗೆದುಕೊಳ್ಳಲಾಗಿದೆ ಈ ಕಾಮಗಾರಿಗಳು ದಿನಾಂಕ 25 2 2006 ರಲ್ಲಿ ಪ್ರಾರಂಭಗೊಂಡಿದ್ದು ಪ್ರಗತಿಯಲ್ಲಿವೆ

ಇದಲ್ಲದೆ ಸದರಿ ರಸ್ತೆಗಳ ಕೆಲವು ಆಯ್ದ ಭಾಗಗಳನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿ ಅಡಿ ಹಾಗೂ ಕೇಂದ್ರ ರಸ್ತೆ ನಿಧಿ (ಸಿ ಆರ್ ಎಫ್) ಅಡಿಯಲ್ಲಿ ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ

294 (146) ಶ್ರೀ ಅಶೋಕ ಗುರಪ್ಪ ಶಾಬಾದಿ (ಸಿಂಧಗಿ) . ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧಗಿ ಪಟ್ಟಣದಲ್ಲಿ ಕುಡಿಯುವ ನೀರು ಸರಬರಾಜಿಗಾಗಿ ಅಳವಡಿಸಿರುವ ಪೈಪ್ ಲೈನ್ ಶಿಥಿಲಗೊಂಡಿದ್ದು (ಹಳೆಯದಾಗಿದ್ದು) ಸಮರ್ಪಕವಾಗಿ ನೀರು ಸರಬರಾಜಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,